## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,

**ಸಿ.ಸಿ. ಸಂಖ್ಯೆಃ 1733/2024**

ಸಿ.ಡಬ್ಲೂಃ 4 /ಪಿ.ಡಬ್ಲೂಃ 4

ಪ್ರಮಾಣೀಕರಿಸಿದ ದಿನಾಂಕಃ 23.9.25

| | |
|---|---|
| ಹೆಸರು | ಹನುಮೇಗೌಡ |
| ತಂದೆಯ ಹೆಸರು | ಮಂಜೇಗೌಡ |
| ವಯಸ್ಸು | 50 ವರ್ಷ |
| ವೃತ್ತಿ | ಬೇಕರಿ ವ್ಯಾಪಾರ |
| ವಾಸ | ಎಂ ವಿ ನಗರ |

### ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

ಚಾಸಾ 2, 3 ಮತ್ತು 5 ರವರು ಪರಿಚಯ. ಆರೋಪಿ ಗೊತ್ತಿಲ್ಲ.

2. ಸಾಕ್ಷಿಯು ನಿಪಿ2 ಪಂಚನಾಮೆಯನ್ನು ಮತ್ತು ತನ್ನ ಸಹಿಯನ್ನು ನೋಡಿ ಗುರ್ತಿಸುತ್ತಾರೆ. ಸದರಿ ಸಹಿಯನ್ನು ನಿಪಿ2 ಬಿ ಎಂದು ಗುರುತಿಸಲಾಯಿತು. ಸುಮಾರು 1 ವರ್ಷದ ಹಿಂದೆ ಪೊಲೀಸರು ಬೆಮೆಲ್ ಪೊಲೀಸ್ ಠಾಣೆ ಬಳಿ ಹೋದಾಗ ಚಾಸಾ1 ರವರಿಗೆ ಅಪಘಾತದ ವಿಚಾರವಾಗಿ ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ನಿಪಿ2 ರಲ್ಲಿ ಪಂಚನಾಮೆಯಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ ಮತ್ತು ಚಾಸಾ1 ರವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೂ ಸಹ ಕರೆದುಕೊಂಡು ಹೋಗಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ನಾನೂ ಸಹ ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ಹಾಲಿ ಪ್ರಕರಣದ ಬಗ್ಗೆ ಬೇರೆ ಏನೂ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

### ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ

ದಿಃ 5.3.2024 ರ ರಾತ್ರಿ 7.30 ಗಂಟೆ ಸಮಯದಲ್ಲಿ ಚಾಸಾ1 ರವರು ಸರ್ಕಾರಿ ವಾಹನ ಸಂ ಕೆಎ 08 ಜಿ 0186 ರ ವಾಹನದಲ್ಲಿ ಬೇತಮಂಗಲ ಬಂಗಾರಪೇಟೆ ಮುಖ್ಯ ರಸ್ತೆಯ ಶಿಲ್ಪಾ ಬಾರ್ ಬಳಿ ಬರುತ್ತಿರುವಾಗ ಆರೋಪಿ ದ್ವಿ ಚಕ್ರ ವಾಹನ ಸಂ ಕೆಎ 02 ಹೆಚ್ ಹೆಚ್ 8990 ರನ್ನು ಅತಿವೇಗವಾಗಿ ಅಜಾಗೂಕತೆಯಿಂದ ಚಾಲನೆ ಮಾಡಿರುತ್ತಾನೆಂದರೆ ಸರಿಯಲ್ಲ. ಆರೋಪಿಯು ವಾಹನವನ್ನು ಅತಿವೇಗವಾಗಿ ಅಜಾಗೂಕತೆಯಿಂದ ಚಾಲನೆ ಮಾಡಿ ಚಾಸಾ1 ರವರ ದ್ವಿ ಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಚಾಸಾ1 ರವರು ರಸ್ತೆ ಮೇಲೆ ಬಿದ್ದು ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ನಂತರ ಚಾಸಾ 2 ಮತ್ತು 3 ರವರು ಅಪಘಾತ ಸ್ಥಳಕ್ಕೆ ಹೋಗಿ ಚಾಸಾ1 ರವರಿಗೆ ಸೊಂಟ, ಬೆನ್ನು, ಕೈ ಮತ್ತು ಕಾಲುಗಳಿಗೆ ಗಾಯಗಳಾಗಿರುವುದನ್ನು ನೋಡಿ ಅಂಬ್ಯುಲೆನ್ಸ್ ಮೂಲಕ ಬೆಮೆಲ್ ಮೆಡಿಕಲ್ ಸೆಂಟರ್ ಗೆ ಕರೆದುಕೊಂಡು ಹೋಗಿರುತ್ತೇವೆಂದರೆ ಸರಿಯಲ್ಲ. ಅಪಘಾತಪಡಿಸಿದ ದ್ವಿ ಚಕ್ರ ವಾಹನದ ಸವಾರನು ಕೆಜಿಎಫ್ ತಾಲ್ಲೂಕಿನ ತಹಶೀಲ್ದಾರ್ ಕಚೇರಿಯಲ್ಲಿ ಡೆಪ್ಯೂಟಿ ತಹಶೀಲ್ದಾರ್ ಎಂದರೆ

ಗೊತ್ತಿರುವುದಿಲ್ಲ. ಸದರಿ ಆರೋಪಿಯು ಅಪಘಾತ ಮಾಡುವಾಗ ಮದ್ಯಪಾನ ಮಾಡಿರುವ ಬಗ್ಗೆ ವಾಸನೆ ಬಂದಿರುತ್ತದೆ ಮತ್ತು ಆತನಿಗೂ ಸಹ ಎಡ ಮೊಣಕೈ, ತರಚಿದ ಗಾಯ ಮತ್ತು ಬಲಗಣ್ಣಿನ ಮೇಲೆ ಊದಿಕೊಂಡ ಗಾಯ ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ನಾನು ಚಾಸಾ$_1$ ರವರನ್ನು ಬೆಮೆಲ್ ಮೆಡಿಕಲ್ ಸೆಂಟರ್ ಗೆ ದಾಖಲುಮಾಡಿದ ನಂತರ ಬಂಗಾರಪೇಟೆ ಆಸ್ಪತ್ರೆಗೆ ಮತ್ತು ಬೆಂಗಳೂರಿನ ಸಕ್ರ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಪೊಲೀಸರು ಬಂದು ಚಾಸಾ$_1$ ರವರನ್ನು ವಿಚಾರಣೆ ಮಾಡಿ ಹೇಳಿಕೆ ದೂರನ್ನು ಪಡೆದಿರುತ್ತಾರೆಂದರೆ ಸರಿಯಲ್ಲ. ನಾನು ದಿಃ 6.3.2024 ರಂದು ಬೆಮೆಲ್ ನಗರದ ಬಸ್ ನಿಲ್ದಾಣದ ಶಿಲ್ಪಾ ಬಾರ್ ಮುಂಭಾಗ ಅಪಘಾತದ ವಿಚಾರವಾಗಿ ನಾನು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ$_2$ ಮತ್ತು 5 ರವರ ಸಮಕ್ಷಮ ಪೊಲೀಸರು ನಿಪಿ$_2$ ರ ಪಂಚನಾಮೆ ಬರೆದಿರುತ್ತಾರೆಂದರೆ ಸರಿಯಲ್ಲ. ನಿಪಿ$_2$ ಪಂಚನಾಮೆಗೆ ಸ್ಥಳದಲ್ಲಿ ಓದಿ ತಿಳಿದುಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ಮೇಲಿ ನಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿ$_5$ ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ-ಆರೋಪಿ ಪರ ಶ್ರೀ ಎಸ್ ಆರ್ ಕೆ ವಕೀಲರಿಂದಃ- ಇಲ್ಲ

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,

**ಸಿ.ಸಿ. ಸಂಖ್ಯೆ 1733/2024**

ಸಿ.ಡಬ್ಲೂ: 3 /ಪಿ.ಡಬ್ಲೂಃ 3

ಪ್ರಮಾಣೀಕರಿಸಿದ ದಿನಾಂಕಃ 23.9.25

| | |
|---|---|
| ಹೆಸರು | ಪ್ರಬು |
| ತಂದೆಯ ಹೆಸರು | ಮಾರಪ್ಪ |
| ವಯಸ್ಸು | 47 ವರ್ಷ |
| ವೃತ್ತಿ | ವ್ಯಾಪಾರ |
| ವಾಸ | ಕತ್ತಿಹಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ಚಾಸಾ 2 ರವರು ಪರಿಚಯ. ಆರೋಪಿ ಗೊತ್ತಿಲ್ಲ.

2. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ ಮತ್ತು ಚಾಸಾ1 ರವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೂ ಸಹ ಕರೆದುಕೊಂಡು ಹೋಗಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ನಾನೂ ಸಹ ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ಹಾಲಿ ಪ್ರಕರಣದ ಬಗ್ಗೆ ಬೇರೆ ಏನೂ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ**

ದಿಃ 5.3.2024 ರ ರಾತ್ರಿ 7.30 ಗಂಟೆ ಸಮಯದಲ್ಲಿ ಚಾಸಾ1 ರವರು ಸರ್ಕಾರಿ ವಾಹನ ಸಂ ಕೆಎ 08 ಜಿ 0186 ರ ವಾಹನದಲ್ಲಿ ಬೇತಮಂಗಲ ಬಂಗಾರಪೇಟೆ ಮುಖ್ಯ ರಸ್ತೆಯ ಶಿಲ್ಪಾ ಬಾರ್ ಬಳಿ ಬರುತ್ತಿರುವಾಗ ಆರೋಪಿ ದ್ವಿ ಚಕ್ರ ವಾಹನ ಸಂ ಕೆಎ 02 ಹೆಚ್ ಹೆಚ್ 8990 ರನ್ನು ಅತಿವೇಗವಾಗಿ ಅಜಾಗೂಕತೆಯಿಂದ ಚಾಲನೆ ಮಾಡಿರುತ್ತಾನೆಂದರೆ ಸರಿಯಲ್ಲ. ಆರೋಪಿಯು ವಾಹನವನ್ನು ಅತಿವೇಗವಾಗಿ ಅಜಾಗೂಕತೆಯಿಂದ ಚಾಲನೆ ಮಾಡಿ ಚಾಸಾ1 ರವರ ದ್ವಿ ಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಚಾಸಾ1 ರವರು ರಸ್ತೆ ಮೇಲೆ ಬಿದ್ದು ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ನಂತರ ನಾನು ಮತ್ತು ಚಾಸಾ2 ರವರು ಅಪಘಾತ ಸ್ಥಳಕ್ಕೆ ಹೋಗಿ ಚಾಸಾ1 ರವರಿಗೆ ಸೊಂಟ, ಬೆನ್ನು, ಕೈ ಮತ್ತು ಕಾಲುಗಳಿಗೆ ಗಾಯಗಳಾಗಿರುವುದನ್ನು ನೋಡಿ ಅಂಬ್ಯುಲೆನ್ಸ್ ಮೂಲಕ ಬೆಮೆಲ್ ಮೆಡಿಕಲ್ ಸೆಂಟರ್ ಗೆ ಕರೆದುಕೊಂಡು ಹೋಗಿರುತ್ತೇವೆಂದರೆ ಸರಿಯಲ್ಲ. ಅಪಘಾತಪಡಿಸಿದ ದ್ವಿ ಚಕ್ರ ವಾಹನದ ಸವಾರನು ಕೆಜಿಎಫ್ ತಾಲ್ಲೂಕಿನ ತಹಶೀಲ್ದಾರ್ ಕಚೇರಿಯಲ್ಲಿ ಡೆಪ್ಯೂಟಿ ತಹಶೀಲ್ದಾರ್ ಎಂದರೆ ಗೊತ್ತಿರುವುದಿಲ್ಲ. ಸದರಿ ಆರೋಪಿಯು ಅಪಘಾತ ಮಾಡುವಾಗ ಮದ್ಯಪಾನ ಮಾಡಿರುವ ಬಗ್ಗೆ ವಾಸನೆ ಬಂದಿರುತ್ತದೆ ಮತ್ತು ಆತನಿಗೂ ಸಹ ಎಡ ಮೊಣಕೈ, ತರಚಿದ ಗಾಯ ಮತ್ತು ಬಲಗಣ್ಣಿನ ಮೇಲೆ ಊದಿಕೊಂಡ ಗಾಯ ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ನಾನು ಚಾಸಾ1 ರವರನ್ನು ಬೆಮೆಲ್ ಮೆಡಿಕಲ್ ಸೆಂಟರ್ ಗೆ ದಾಖಲುಮಾಡಿದ ನಂತರ ಬಂಗಾರಪೇಟೆ ಆಸ್ಪತ್ರೆಗೆ ಮತ್ತು ಬೆಂಗಳೂರಿನ ಸಕ್ರ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಪೊಲೀಸರು ಬಂದು ಚಾಸಾ1 ರವರನ್ನು ವಿಚಾರಣೆ ಮಾಡಿ ಹೇಳಿಕೆ ದೂರನ್ನು ಪಡೆದಿರುತ್ತಾರೆಂದರೆ ಸರಿಯಲ್ಲ.

ನಾನು ಮೇಲಿ ನಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿ4 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ-ಆರೋಪಿ ಪರ ಶ್ರೀ ಎಸ್ ಆರ್ ಕೆ ವಕೀಲರಿಂದಃ- ಇಲ್ಲ

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.